## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2453
ಮಾನ್ಯ ಸದಸ್ಯರ ಹೆಸರು : ಶ್ರೀ ಎಫ್ .ಹೆಚ್ ಜಕ್ಕಪ್ಪನವರ್
ಉತ್ತರಿಸಬೇಕಾದ ದಿನಾಂಕ : 27.03.2026
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು,

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2026, ಬೆಂಗಳೂರು ದಿನಾಂಕ: 27.02.2026 ರ ಆದೇಶದಲ್ಲಿ ಹಳೆ ಮೀಸಲಾತಿ ಶೇಕಡ 15+3 ರಂತೆ ಮೀಸಲಾತಿ ನೀಡಲು ಆದೇಶ ಹೊರಡಿಸಿರುವುದರಿಂದ ಪರಿಶಿಷ್ಟ ಜಾತಿಯವರಿಗೆ ಸುತ್ತೋಲೆ ಸಂಖ್ಯೆ ಸಕಇ/08/ಎಸ್‌ಎಲ್ಪಿ/2024(ಭಾಗ-5), ದಿನಾಂಕ:08.10.2025ರ ನಿರ್ದೇಶನದಂತೆ ಜಾತಿ ಪ್ರಮಾಣ ಪತ್ರಗಳನ್ನು ಪ್ರವರ್ಗ-A,B,C ಎಂದು ವರ್ಗೀಕರಿಸಿರುವುದನ್ನು ಹಿಂಪಡೆಯಲು ಕ್ರಮವಹಿಸುತ್ತದೆಯೇ; | ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ಈ ಹಂತದಲ್ಲಿ ದಿನಾಂಕ:08-10-2025ರ ಸುತ್ತೋಲೆಯನ್ನು ಹಿಂಪಡೆದಿರುವುದಿಲ್ಲ. ಒಳ ಮೀಸಲಾತಿ ಬಗ್ಗೆ ಮಾನ್ಯ ನ್ಯಾಯಾಲಯದ ಅಂತಿಮ ತೀರ್ಮಾನವಾದ ನಂತರ, ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು. |
| ಆ) | ದಿನಾಂಕ: 08.10.2025 ರ ಸುತ್ತೋಲೆಯನ್ನು ಹಿಂಪಡೆದರೆ ಹಿಂದಿನ ಜಾತಿ ಪ್ರಮಾಣ ಪತ್ರವನ್ನೇ ಮರು ಜಾರಿ ಮಾಡಲು ಕ್ರಮವಹಿಸುತ್ತದೆಯೇ; | |
| ಇ) | ಹಿಂದಿನ ಜಾತಿ ಪ್ರಮಾಣ ಪತ್ರ ಮರು ಜಾರಿ ಮಾಡಲು ಅವಕಾಶವಿಲ್ಲವೆಂದರೆ, ಪ್ರವರ್ಗ A,B,C ಎಂದು ವರ್ಗ ಪ್ರಮಾಣ ಪತ್ರ ನೀಡದೇ ಮೂಲ ಜಾತಿಗಳನ್ನು ನಮೂದಿಸಿ ಜಾತಿ ಪ್ರಮಾಣ ಪತ್ರ ನೀಡಲು ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ಆದೇಶದ ಮೂಲಕ ನಿರ್ದೇಶನ ನೀಡಲಾಗುವುದೇ; | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2026, ದಿನಾಂಕ: 27-02-2026 ರಂತೆ ನೇಮಕಾತಿ ಮಾಡುವಲ್ಲಿ ಹಿಂದಿನಂತೆ ಹಳೆಯ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳಂತೆ ವಿದ್ಯಾಭ್ಯಾಸ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಪಡೆಯಬಹುದಾಗಿದೆ. |
| ಈ) | ಪ್ರಸ್ತುತ ವಿದ್ಯಾಭ್ಯಾಸಕ್ಕೆ ಹಾಗೂ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ತಕ್ಷಣ ಜಾತಿ ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗದವರು ಹಳೆ ಜಾತಿ ಪ್ರಮಾಣ ಪತ್ರವನ್ನು ಪ್ರಸ್ತುತ ಸಲ್ಲಿಸಿ ಮುಂದೆ ಪರಿಶೀಲನಾ ಸಂದರ್ಭದಲ್ಲಿ ಹೊಸ ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಅವಕಾಶವಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು? | |

ಸಂಖ್ಯೆ:ಸಕಇ 355 ಪಕವಿ 2026

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**